**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ**

ಅಸಲು ದಾವೆ ನಂ**. 1077/2021** ದಿನಾಂಕಃ **23.06.2026**
ಪಿ.ಡಬ್ಲೂಃ**-02**

**: ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು :**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎಲ್.ಡಿ.ಹೆಚ್. ರವರಿಂದಃ-**

ನನಗೆ 1ನೇ ಪ್ರತಿವಾದಿಯ ಪರಿಚಯ ಇದೆ. ಅವರ ತಂದೆ ಹೆಸರು ಬಸಪ್ಪ. ವಾದಿ ಸದರಿ ಬಸಪ್ಪನ ತಮ್ಮ. ಮಹದೇವ ದೇವರಮನಿಯವರಿಗೆ 3 ಜನ ಹೆಣ್ಣು ಮಕ್ಕಳು. ಸದರಿ ಹೆಣ್ಣು ಮಕ್ಕಳು ಅಡಹಳ್ಳಿ ಗ್ರಾಮದಲ್ಲಿ ವಾಸ ಇಲ್ಲ ಎಂದರೆ ಸರಿ. ಅವರು ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ವಾಸ ಇರುವ ಕಾರಣ ಅವರ ಕುಟುಂಬದ ಎಲ್ಲ ಆಸ್ತಿಗಳನ್ನು ಬಸಪ್ಪ ದೇವರಮನಿಯವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಬಸಪ್ಪ ಮತ್ತು 1ನೇ ವಾದಿಯ ನಡುವೆ ಯಾವುದೇ ಪಾಲು ವಿಭಾಗದ ಕುರಿತು ವ್ಯವಹಾರ ಆದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

2004ರಲ್ಲಿ 1ನೇ ವಾದಿಯು ತನ್ನ ಪಾಲಿನ ಹಿಸ್ಸೆಯನ್ನು ಪ್ರತಿವಾದಿಯರಿಗೆ ಬಿಟ್ಟುಕೊಟ್ಟು ಅದರ ಬದಲು ರೂ.20 ಸಾವಿರ ಹಣ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ಸ್ಟ್ಯಾಂಪ ಕಾಗದದ ಮೇಲೆ ಬರವಣಿಗೆ ಮಾಡಿ ಉಭಯ ಪಕ್ಷಗಾರರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಅದು ಖೊಟ್ಟಿ ದಾಖಲೆ ಎಂದು ನುಡಿಯುತ್ತಾರೆ. ಆ ರೀತಿ ದಾಖಲೆ ಬರೆದುಕೊಂಡ ವಿಚಾರ ನನಗೆ ಆ ಸಮಯದಲ್ಲಿ ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ದಾಖಲೆ ಖೊಟ್ಟಿ ದಾಖಲೆ ಎಂದು ನಮ್ಮ ಊರಿನ ಹಿರಿಯರು ಹೇಳಿರುತ್ತಾರೆ. ಸದರಿ ದಾಖಲೆ ಖೊಟ್ಟಿ ದಾಖಲೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಂತೆ ಆಸ್ತಿಗಳು ಬಸಪ್ಪನವರಿಗೆ ಬಂದಿದ್ದು ಅವರು 1ನೇ ಪ್ರತಿವಾದಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಡೈರಿ ನಂಬರ 27/2005-06 ರಂತೆ 1ನೇ ಪ್ರತಿವಾದಿಗೆ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡೈರಿ ನಮೂದನ್ನು ಪ್ರಶ್ನಿಸಿ ವಾದಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಏನೇನು ವ್ಯವಹಾರ ನಡೆದಿದೆ ಎಂದು ನನಗೆ ಪ್ರತ್ಯಕ್ಷ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ 30.08.2005 ರ ದಾಖಲೆಗೆ ವಾದಿ ಮತ್ತು ವಾದಿಯ ಮಕ್ಕಳು ಸಹಿ ಮಾಡಿರುತ್ತಾರ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಬಗ್ಗೆ ಯಾವುದೇ ಮಾವಹಿತಿ ಇಲ್ಲದಿದ್ದರೂ ವಾದಿ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

(ಓಂಕಾರಮೂರ್ತಿ ಹೆಚ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ